**ಅಸಲು ದಾವಾ ಸಂ.39/2016**
ಪಿ .ಡಬ್ಲ್ಯೂ-1

ದಿನಾಂಕ 29-01-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಪ್ರತಿವಾದಿ ನಂ.1 ರಿಂದ 8 ಪರ ಶ್ರೀ ಎಸ್ ಎ ಎಸ್ ವಕೀಲರಿಂದಃ**

ಪ್ರತಿವಾದಿಯರು ದಾವೆಯಲ್ಲಿ ಹಾಕಿರುವ ತಕರಾರನ್ನು ಓದಿ ತಿಳಿದುಕೊಂಡಿರುವದಿಲ್ಲ. ಖರೀದಿ ಪತ್ರದಲ್ಲಿ ನಮೂದಿರುವಂತೆ 03 ಪ್ಲಾಟಗಳ ಚಕಬಂದಿಯನ್ನು ತೋರಿಸಲು ಖರೀದಿ ಪತ್ರ ಹೊರತು ಪಡಿಸಿ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಪುರಸಭೆಯ ಉತಾರೆಯನ್ನು ಹಾಜರು ಮಾಡಿರುತ್ತೇನೆ. ನಾನು ಪ್ಲಾಟಗಳನ್ನು ಖರೀದಿ ಮಾಡುವ ಮೊದಲೇ ಪುರಸಭೆಯವರು ಅಳತೆ ಮಾಡಿ ಚಕಬಂದಿಯನ್ನು ಕೊಟ್ಟಿರುತ್ತಾರೆ. ಸದರಿ ಅಳತೆ ಮಾಡಿ ಚಕಬಂದಿ ಕೊಟ್ಟ ದಾಖಲೆಯನ್ನು ಹಾಜರು ಮಾಡಿರುತ್ತೇನೆ. ನಾನು ಹಾಜರು ಪಡಿಸಿದ ದಾಖಲೆಗಳಲ್ಲಿ ಅಂತಹ ಯಾವುದೇ ದಾಖಲೆಗಳು ಇರುವದಿಲ್ಲ ಎಂದರೆ ಸರಿ. ಚಕಬಂದಿ ಕುರಿತಾಗಿ ಪುರಸಭೆಯವರಿಂದ ಅಂತಹ ದಾಖಲೆಯನ್ನು ತೆಗೆದುಕೊಂಡಿರುವದಿಲ್ಲ ಎಂದರೆ ಸರಿಯಲ್ಲ. ಅಂತಹ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇರುವದಿಲ್ಲ. ಅದನ್ನು ವಕೀಲರಿಗೆ ಕೊಟ್ಟಿರುತ್ತೇನೆ.

ದಾವಾ ಪ್ಲಾಟಗಳು ಖರೀದಿ ಪತ್ರದಲ್ಲಿ ಹೇಳಿದಂತಹ ಚಕಬಂದಿಯಲ್ಲಿ ಇದೆ ಎಂದು ನಾನು ಅವುಗಳನ್ನು ಖರೀದಿ ಕೊಡುವವರಿಂದ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ಸದರಿಯವರೇ ಪುರಸಭೆಯಲ್ಲಿ ಅರ್ಜಿ ನೀಡಿ ಸರ್ವೆ ಮಾಡಿಸಿ ಪ್ಲಾಟಗಳನ್ನು ಖರೀದಿ ಕೊಟ್ಟಿರುತ್ತಾರೆ. ಮಾರಾಟ ಮಾಡಿದವರಿಂದ ಪಡೆದ ದಾಖಲೆಯನ್ನು ಹಾಜರು ಪಡಿಸಿರುವದಿಲ್ಲ ಎಂದರೆ ಸರಿ. ಪಾರ್ವತಿ ಮತ್ತು ಭಾಗಿರತಿ ಇವರಿಗೆ ಪ್ಲಾಟಗಳು ಮೈತ ಮಲಕಪ್ಪ ಇವರಿಂದ ಬಂದಿರುತ್ತದೆ ಎಂದರೆ ಸರಿ. ಸದರಿಯವರ ಜೀವಿತಾವಧಿಯಲ್ಲಿ ಪ್ಲಾಟ ನಂಬರ 49 ರಿಂದ 51 ರ ಪ್ಲಾಟಗಳನ್ನು ಅವರು ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆಂದು ನನಗೆ ಹೇಳಲು ಬರುವದಿಲ್ಲ. ಸದರಿ ಪ್ಲಾಟಗಳನ್ನು ಮಲಕಪ್ಪ ಇವರು ರಾಮದಾಸ ಮಾಂಡವಕರ ಮತ್ತು ಸಿಂಗನ್ ಎನ್ನುವವರಿಗೆ ದಿ 25-07-1982 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವದಿಲ್ಲ. ರಾಮದಾಸ ಮಾಂಡವಕರ ಇವರನ್ನು ನಮ್ಮ ಖರೀದಿ ಪತ್ರದಲ್ಲಿ ದಕ್ಷಿಣ ಚಕಬಂದಿಯಲ್ಲಿ ತೋರಿಸಿದ್ದು ಸದರಿಯವರಿಗೆ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. ಅವರ ಆಸ್ತಿ ನಂಬರ ನನಗೆ ಗೊತ್ತಿರುವದಿಲ್ಲ. ಸಿಂಗನ್ ಇವರ ಜಾಗೆ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿರುವದಿಲ್ಲ. ಅದೇ ರೀತಿ ಅವರ ಜಾಗೆಯ ನಂಬರ ಮತ್ತು ಕ್ಷೇತ್ರ ನನಗೆ ಗೊತ್ತಿರುವದಿಲ್ಲ. ರಾಮದಾಸ ಮಾಂಡವಕರ ಇವರ ಜಾಗೆ ಎಷ್ಟು ಇದೆ ಎಂದು ನನಗೆ ಗೊತ್ತಿರುವದಿಲ್ಲ.

ದಾವಾ ಪ್ಲಾಟಗಳನ್ನು ನಾನು ಖರೀದಿ ಮಾಡಿದಾಗ ಪ್ರತಿವಾದಿಯರು ಅಲ್ಲಿಗೆ ಬಂದು ಜಾಗ ಅವರದು ಇದೆ ಎಂದು ಗಲಾಟೆ ಮಾಡಿರುತ್ತಾರೆ. ಅದರ ನಂತರ ಮಾರಾಟ ಮಾಡಿದವರಿಂದ, ಚಕಬಂದಿದಾರರ ಹತ್ತಿರ ಈ ಕುರಿತಾಗಿ ವಿಚಾರಣೆ ಮಾಡಿರುವದಿಲ್ಲ. ನಾನು ಖರೀದಿ ಮಾಡಿದ ನಂತರ ಅದರ ಜಾಗಾ ಸ್ಥಳದಲ್ಲಿ ಇರುವದಿಲ್ಲ ಎಂದು ಪ್ರತಿವಾದಿಯರು ನನಗೆ ತಿಳಿಸಿರುತ್ತಾರೆಂದರೆ ಸರಿ. ಆಗ ಜಾಗಾ ಗುರುತಿಸಿಕೊಡಲು ಕೇಳಿ

ಪುರಸಭೆಗೆ ಅರ್ಜಿಯನ್ನು ಕೊಟ್ಟಿರುವದಿಲ್ಲ. ಪ್ರತಿವಾದಿಯರ ಗಲಾಟೆಯ ಆಧಾರದ ಮೇಲೆ ಈ ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿ.

ಖರೀದಿ ಪತ್ರ ಮತ್ತು ವಾದ ಪತ್ರದಲ್ಲಿ ಕಾಣಿಸಿರುವ ಚಕಬಂದಿ ಸರ್ವೆ ನಂಬರ 18 ರ ಪ್ಲಾಟ ನಂಬರ 44 ರ ಚಕಬಂದಿ ಇರುತ್ತದೆ ಎಂದರೆ ಸರಿಯಲ್ಲ. 44 ನೇ ಪ್ಲಾಟ ನಂಬರ ಆಸ್ತಿ ಪ್ರತಿವಾದಿಯರ ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿರುವದಿಲ್ಲ. ಈ ಎಲ್ಲ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ಲಾಟ ಮಾರಾಟ ಮಾಡಿದವರ ಹತ್ತಿರ ಹೋಗಿ ಪ್ರತಿವಾದಿಯರ ಚಕಬಂದಿ ತಕರಾರಿನ ಕುರಿತು ವಿಚಾರಣೆ ಮಾಡಿರುವದಿಲ್ಲ. ರಾಮದಾಸ ಮಾಂಡವಕರ ಮತ್ತು ಸಿಂಗನ್ ಎನ್ನುವವರಿಗೆ 03 ಪ್ಲಾಟಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಪ್ರತಿವಾದಿಯರು ನನಗೆ ಹೇಳಿದ್ದು ಈ ಕುರಿತಾಗಿ ಮಾರಾಟ ಮಾಡಿದವರನ್ನು ನಾನು ವಿಚಾರಣೆ ಮಾಡಿರುವದಿಲ್ಲ. ರಾಮದಾಸ ಮಾಂಡವಕರ ಮತ್ತು ಸಿಂಗನ್ ಇವರ ಖರೀದಿ ಪತ್ರಗಳನ್ನು ನಾನು ತೆಗೆದುಕೊಂಡು ವಿಚಾರಣೆ ಮಾಡಿರುವದಿಲ್ಲ. ನಾನು ಮತ್ತು ಮಾರಾಟ ಮಾಡಿದವರು ಕೂಡಿ ತಪ್ಪಾದ ಚಕಬಂದಿಯನ್ನು ನಮೂದಿಸಿ ಖೊಟ್ಟಿ ಖರೀದಿ ಪತ್ರ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಖರೀದಿ ಪತ್ರ ತಪ್ಪು ಇರುತ್ತದೆ ಎಂದು ಪ್ರತಿವಾದಿಯರು ಹೇಳಿದರೂ ಸಹ ನಾನು ತಪ್ಪಾದ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸುಳ್ಳು ಮತ್ತು ತಪ್ಪಾದ ದಾವೆಗೆ ಅನುಕೂಲವಾಗುವಂತೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.